ತುಟಿಗಳು, ಒಡೆದ ಚರ್ಮ. (ಬೆಟ್ಟದ ಮೇಲಿನ ಎತ್ತರದ ಮನೆಗಳಲ್ಲಿ ವಾಸಿಸುವ ಶ್ರೀಮಂತರು ವಾಹನಗಳಲ್ಲಿ ತೇಲಿಹೋದರು. ಹಾಗೆ ಹೋಗುವಾಗ, ನೀರು ಹಂಚುವ ಮನುಷ್ಯನ ಜೊತೆ ಎಚ್ಚರದ ಮುಗುಳ್ನಗೆಗಳನ್ನು ವಿನಿಮಯ ಮಾಡಿಕೊಂಡರು. ಅವನ ಜೇಬುಗಳು ತುಂಬಿತುಳುಕುತ್ತಿದ್ದವು. ಶ್ರೀಮಂತರ ಈಜುಕೊಳಗಳು ಕೂಡ ಅವರಿಗೆ ಬೇಕಾದಷ್ಟು ನೀರಿನಿಂದ ತುಂಬಿ ತುಳುಕುತ್ತಿದ್ದವು. ನಮಗೆ? ಅಳೋಣ ಅಂದ್ರೆ ಒಂದು ಹನಿ ಕಣ್ಣೀರು ಕೂಡಾ ಇಲ್ಲ.)

**ಪವಿತ್ರ ಶನಿವಾರ:**[3] ಊರಿನ ತುಂಬಾ ಮೌನ, ನನ್ನ ಜೀವನದಲ್ಲಿಯೂ ಹಾಗೆಯೇ, ಸದ್ದಿಲ್ಲ. ನೀರು ಹಂಚೋ ಮನುಷ್ಯನ ಎಡಗೈ, ಮುಖ ಮತ್ತು ಒಂದು ತೊರಡುಬೀಜ ಮಾತ್ರ ಮನುಷ್ಯರ ಮಾಂಸದ ಬಣ್ಣ ಇವೆ. ಅವನ ಉಳಿದಿದ್ದೆಲ್ಲಾ ಕಡುನೀಲಿ. ಯಾಕೆ ಅಂತ ನಂಗೂ ಗೊತ್ತಿಲ್ಲ. ಇವತ್ತು ಹುಡುಗರು ಮಾತ್ರ ಹೊರಗಡೆ ಓಡಾಡ್ತಾ ಇದಾರೆ, ಮತ್ತು ನಾಯಿಗಳು ನಾಲ್ಕು ಕಾಲುಗಳ ಮೇಲೆ ತೊಗಲಿನ ಚೀಲ ಹಾಕಿದ ಹಾಗೆ ಕಾಣಿಸ್ತಿವೆ.

ನಮ್ಮ ಮನೆಯ ಕಿಟಕಿಯಿಂದ ಟ್ರಕ್ ಬಂದಿದ್ದು ಕಾಣಿಸಿತು, ಅದರ ತುಂಬಾ ಜುಡಾಸ್ ಗೊಂಬೆಗಳು– ಕೊಂಬುಗಳಿರೋ ಕೆಂಪು ಪಿಶಾಚಿಗಳು– ನಾನು ಒಪ್ಕೋತೀನಿ, ನನಗೆ ನಾನೇ ಹೇಳಿಕೊಂಡೆ: ನಮ್ಮ ಜುಡಾಸ್ ಕೆಂಪಗಿಲ್ಲ. ಅವನ ಬಣ್ಣ ನೀಲಿ. ನಮಗೆ ಅವನನ್ನು ಕಂಡರೆ ಭಯ. ಅವನನ್ನ ಕಾಗದದ ತಿರುಳಿನಿಂದ ಮಾಡಿಲ್ಲ. ಅವನು ಟೊಳ್ಳಲ್ಲ. ಅವನಾದ್ಯಂತ ಕೆಟ್ಟತನ ತುಂಬಿದೆ.

ತುಂಬಾ ಏನು ಗಮನ ಕೊಡದೆ ನಾನು ಇದನ್ನೂ ನೋಡಿದೆ: ಪ್ರತಿಯೊಂದು ಜುಡಾಸ್ ಗೊಂಬೆಯ ಹೊಟ್ಟೆಯಲ್ಲೂ ಸಿಡಿಮದ್ದು–ಪಟಾಕಿಗಳನ್ನು ತುರುಕಿದ್ದು, ಅವುಗಳ ಕುತ್ತಿಗೆ ಸುತ್ತಲೂ ಪಟಾಕಿ ಸರ ಹಾಕಿದ್ದು, ಆಮೇಲೆ ಬಹಳ ಎಚ್ಚರಿಕೆಯಿಂದ ಪ್ರತಿಯೊಂದು ಗೊಂಬೆಯ ಕೊಂಬುಗಳ ನಡುವೆ ಅದೆಲ್ಲದರ ಫ್ಯೂಸ್ ಅಳವಡಿಸಿದ್ದನ್ನು. (ಆದರೆ ಒಂದು ಸಂಗತಿಯನ್ನು ನೋಡೋದೇ ಬೇರೆ, ಅದನ್ನು ಆಮೇಲೆ ಹೇಗೆ ಉಪಯೋಗಿಸಿಕೊಳ್ಳಬೇಕು ಅಂತ ಯೋಚನೆ ಮಾಡೋದೇ ಬೇರೆ.)

(ಎಲ್ಲರೂ ಅದನ್ನು ನೋಡಿದರು. ನಾನೂರು ವರ್ಷಗಳ ನಂತರ, ಅವರೆಲ್ಲರಿಗೂ ಅದರ ಬಗ್ಗೆ ನನಗಿಂತ ಚೆನ್ನಾಗಿ ಗೊತ್ತು, ನಿಜ, ನಾನೂ ಅವರ ಪರವಾಗಿಯೇ ಯೋಚನೆ ಮಾಡ್ತಾ ಇದ್ದೆ. ಆದರೆ ಅಷ್ಟು ದೂರದಿಂದ ಬಂದ ನನಗೆ ಅವರಷ್ಟು ಗೊತ್ತಿರಲಿಲ್ಲ. ಪ್ರಮಾಣ ಮಾಡಿ ಹೇಳ್ತೀನಿ. ಆ ಕೆಲಸ ಮಾಡಿದ್ದು ನಾನಲ್ಲ. ದಯವಿಟ್ಟು ಮತ್ತೆ ಅದೇ ತಪ್ಪು ಮಾಡಬೇಡಿ. ಹೊರಗಿನಿಂದ ಬಂದ ಅಪರಿಚಿತನ ಮೇಲೆ ಗೂಬೆ ಕೂರಿಸೋ ಕೆಲಸ ಮಾಡಬೇಡಿ. ಅಂಥವರನ್ನು ಹೊರಗಿಟ್ಟು ಹಾರೈಸೋದೂ ಬೇಡ, ಶಾಪ ಕೊಡೋದೂ ಬೇಡ.)

(ನಿನ್ನ ಮನೆಯ ಬಣ್ಣದ ವಿಷಯ ಏನು ಅಂತ ಅವರು ಆನಂತರ ಕೇಳಿದ್ರು. ನಾನು ಸುಮ್ಮನೆ ಭುಜ ಕುಣಿಸಿದೆ: ಅವನ ಸಮಾಧಿಯ ಬಣ್ಣ.)

ಮತ್ತು, ರಾತ್ರಿ ಹನ್ನೊಂದು ಗಂಟೆಗೆ ಅವರು ಮರದ ಮಣೆಯನ್ನು ರಟರಟ ಬಾರಿಸಿ ನಮ್ಮನ್ನು ಪೂಜೆಗೆ ಕರೆದರು. ಈಸ್ಟರ್ ಭಾನುವಾರ – ಮಧ್ಯರಾತ್ರಿ: ಗಂಟೆ ವಿಚಿತ್ರವಾಗಿ ಹೊಡೆದುಕೊಳ್ಳುತ್ತಿದೆ. ಈ ಊರಿನಲ್ಲಿ ಇನ್ನೂ ಚೈತನ್ಯ ಉಳಿದಿದೆಯೇ ಎಂದು ಆಶ್ಚರ್ಯವಾಗುವಂತ ಸದ್ದು. ರಾತ್ರಿ ಒಂದು ಗಂಟೆಗೆ, ಪಟಾಕಿಗಳ ಶಬ್ದದ ಮೊದಲ ಸುತ್ತು. ಎರಡೂವರೆ ಗಂಟೆಗೆ ಮಳೆ ಶುರುವಾಯಿತು. ಹಲವು ತಿಂಗಳುಗಳ ಬರಗಾಲ ಮುಕ್ತಾಯವಾಯಿತು. ಆಹಾ! ಎಂಥ ಅಪರೂಪದ ಅತಿಥಿ. ಬಯಸಿ ಬಂದ ಅತಿಥಿ. ಎಷ್ಟು ದಿನಗಳಿಂದ ಕಾದಿದ್ದೆವು ನಾವು. ಸದ್ಯ! ಇನ್ನು ನಮಗೆ ಅವನ ಅಗತ್ಯವಿಲ್ಲ... (ಇರುಳಿಡೀ ಮಳೆ ಬಂತು. ಮರುದಿನ ಬೆಳಿಗ್ಗೆ ಹನ್ನೊಂದು ಗಂಟೆಯ ಪ್ರಾರ್ಥನೆಯವರೆಗೆ ಮಳೆ ಸುರಿಯಿತು. ಕಾನ್ವೆಂಟಿನಲ್ಲಿ ಸೇರಿದ್ದ ಜನರು ಸ್ವರ್ಗದ ಅಪಾರ ಕರುಣೆಗೆ ವಂದನೆಗಳನ್ನು ಸಲ್ಲಿಸಿದರು. ಅವರು ಮಂಡಿಯೂರಿ ಪ್ರಾರ್ಥನೆ ಮಾಡಿದರು. ಅವರ ಪಾದ, ಹಿಂಗಾಲಿಗೆ ಮೆತ್ತಿಕೊಂಡ ಕೆಸರು ಜಗತ್ತಿಗೇ ಕಾಣಿಸುತ್ತಿತ್ತು.)

---

3. **ಪವಿತ್ರ ಶನಿವಾರ:** ಇದನ್ನು 'ಈಸ್ಟರ್ ವಿಜಿಲ್' ಎಂದೂ ಕರೆಯಲಾಗುತ್ತದೆ. ಕ್ರಿಸ್ತನ ಮರಣದ ಕೊನೆಯ ದಿನವಾಗಿ ಈ ದಿನವನ್ನು ಆಚರಿಸಲಾಗುತ್ತದೆ, ನರಕದ ಸಂಕಟವನ್ನು ಸ್ಮರಿಸುವ ದಿನ ಇದಾಗಿದೆ.